**ಆಯೂಬ್ ಅಹ್ಮದ್** ಅನಾಥ ಶವಗಳ ಪಾಲಿಗೆ ಬಂಧುವೂ ಹೌದು ಮಿತ್ರನೂ ಹೌದು. ಈವರೆಗೆ ಹತ್ತು ಸಾವಿರಕ್ಕೂ ಹೆಚ್ಚು ಶವಗಳನ್ನು ಸಾಗಿಸಿರುವ ಅವರು, 'ಕೋವಿಡ್ 19'ರ ಕಾಲದಲ್ಲೂ ತಮ್ಮ ಕೆಲಸದಿಂದ ವಿಮುಖರಾಗಿಲ್ಲ. ಕುಟುಂಬದ ಸದಸ್ಯರು ಅಂತ್ಯಸಂಸ್ಕಾರ ನಡೆಸಲು ಹಿಂಜರಿದಾಗ, ಆಯೂಬ್ ತಾವೇ ಕಾಳಜಿಯಿಂದ ಅಂತಿಮ ವಿಧಿವಿಧಾನಗಳನ್ನು ನಡೆಸಿದ್ದಾರೆ. ಈ ಮಾನವೀಯ ಕೆಲಸವೇ ಅವರಿಗೆ ಈ ಬಾರಿಯ ದಸರೆ ಉದ್ಘಾಟನೆ ಕಾರ್ಯಕ್ರಮಕ್ಕೆ ಆಹ್ವಾನ ದೊರಕಿಸಿಕೊಟ್ಟಿದೆ.

■ ಕೆ. ಓಂಕಾರ ಮೂರ್ತಿ




# ಅನಾಥ ಶವಗಳಿಗೊಬ್ಬ ಬಂಧು–ಮಿತ್ರ

## 10 ಸಾವಿರ ಅನಾಥ ಶವ ಸಾಗಿಸಿರುವ ಮೈಸೂರಿನ ಆಯೂಬ್ ಅಹ್ಮದ್



ಅನಾಥ ಹಾಗೂ ಅಪರಿಚಿತ ಶವಗಳಿಗೆ ಮುಕ್ತಿ ನೀಡಿ ಮಾನವೀಯತೆ ಮೆರೆಯುತ್ತಿರುವ ಈ 'ವೀರಬಾಹು'ವಿನ ಹೆಸರು ಆಯೂಬ್ ಅಹ್ಮದ್. ಮೈಸೂರಿನ ಉದಯಗಿರಿಯ ಇವರಿಗೆ 'ಮುಕ್ತಿದಾತ', 'ಬಾಡಿ ಮಿಯಾ' ಎಂಬ ಹೆಸರೂ ಇವೆ. ಕೆರೆ ಕಟ್ಟೆ ಕಾಲುವೆಗಳಲ್ಲಿ ಬಿದ್ದು ಕೊಳೆತು ಗಬ್ಬು ನಾರುವ ಅಪರಿಚಿತ ಹೆಣಗಳನ್ನು, ಅಪಘಾತದಿಂದ ಸತ್ತ, ವಾರಸುದಾರರು ಇಲ್ಲದ ವ್ಯಕ್ತಿಗಳ ರಕ್ತಸಿಕ್ತ ದೇಹಗಳನ್ನು, ಯಾವುದೋ ಬೀದಿಯಲ್ಲಿ ಬಿದ್ದು ಶವವಾಗುವ ಅನಾಥರನ್ನು ಸಾಗಿಸಿ ಅಂತ್ಯಸಂಸ್ಕಾರ ಮಾಡುತ್ತಾರೆ. 'ಬಾಡಿಗೆ ಮನೆಯಲ್ಲಿ ಇರುವವರನ್ನು ಸ್ವಂತ ಮನೆಗೆ ಕಳಿಸಲು ಸೇತುವೆಯಾಗಿ ಕೆಲಸ ಮಾಡುತ್ತಿದ್ದೇನೆ' ಎಂದವರು ತಮ್ಮ ಕಾಯಕವನ್ನು ಬಣ್ಣಿಸುತ್ತಾರೆ.